ಕರ್ನಾಟಕ ವಿಧಾನ ಸಭೆ

ಮಂಗಳವಾರ 10ನೇ ಮಾರ್ಚ್ 1998ರಂದು ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ: 11-00 ಘಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ಎಸ್.ರಮೇಶ್‌ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು.

(1) ವಿಷಯ: ರೈತರು ಬೆಳೆ ಹಾನಿಯಿಂದಾಗಿ ಸತ್ತಿರುವ ಬಗ್ಗೆ.

+ ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿವಸ ಮಾನ್ಯ ರಾಜ್ಯಪಾಲರು ಭಾಷಣ ಮಾಡುವಂಥ ಕಾಲದಲ್ಲಿ ಆ ಸ್ಥಾನಕ್ಕೆ ಗೌರವ ಕೊಡಬೇಕೆನ್ನುವ ದೃಷ್ಟಿಯಿಂದ ಅನೇಕ ಪ್ರಮುಖ ವಿಷಯಗಳ ಬಗ್ಗೆ ಮಾತನಾಡಬೇಕೆಂದಿದ್ದರೂ ಕೂಡ ನಾವು ಗೌರವದಿಂದ ಕುಳಿತಿದ್ದೆವು. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಗುಲ್ಬರ್ಗಾ ಜಿಲ್ಲೆ, ಅದರಲ್ಲಿಯೂ ವಿಶೇಷವಾಗಿ ಬೀದರ್ ಜಿಲ್ಲೆಯಲ್ಲಿ ರೈತರು ಬೆಳೆದ ತೊಗರಿಬೇಳೆ ನಾಶವಾಗಿ 10-12 ಜನ ರೈತರು ವಿಷ ತೆಗೆದುಕೊಂಡು ಸತ್ತಿದ್ದಾರೆ. ಆದ್ದರಿಂದ ಈಗ ಪ್ರಶ್ನೋತ್ತರ ವೇಳೆಯನ್ನು ಮುಂದೂಡಿ ರೈತರ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ದೇಶಕ್ಕೆ ಅನ್ನ ಕೊಡುವಂಥ ಅನ್ನದಾತ, ಆ ರೈತ ಬೆಳೆದಂಥ ಬೆಳೆಗೆ ಬೆಲೆ ಸಿಗದೆ, ಬೆಳೆದಂಥ ಬೆಳೆ ಸಂಪೂರ್ಣ ನಾಶವಾಗಿ 10-12 ಜನ ಸತ್ತಿರುವಂಥದ್ದು ಇದು ಇತಿಹಾಸದಲ್ಲಿಯೇ ಮೊದಲನೇ ಸಲವಾಗಿದೆ. ಇಂಥ ಸಂದರ್ಭದಲ್ಲಿ ಇಂತಹ ರೈತರ ಜೀವನದ ಜೊತೆ ಸರ್ಕಾರ ಚೆಲ್ಲಾಟ ಮಾಡುವಂಥದ್ದು ಸರಿಯಲ್ಲ. ಅದಕ್ಕೋಸ್ಕರ ಈ ವಿಷಯಕ್ಕೆ ಪ್ರಾಶಸ್ತ್ಯ ಕೊಟ್ಟು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಪ್ರಶ್ನೋತ್ತರ ವೇಳೆಯನ್ನು ಈ ವಿಷಯ ಚರ್ಚೆಯಾದ ನಂತರ ತೆಗೆದುಕೊಳ್ಳಬಹುದು. ನನಗೆ ಆಶ್ಚರ್ಯ ಏನೆಂದರೆ - ಯಾವುದೋ ಗಲಾಟೆಯಲ್ಲಿ ಎಲ್ಲೋ ಗುಂಡು ಹಾರಿಸಿ ಯಾರೋ ಸತ್ತರೆ ಅಂಥವರಿಗೆ ಸರ್ಕಾರ ಒಂದು ಲಕ್ಷ ರೂಪಾಯಿ ಪರಿಹಾರವೆಂದು ಕೊಡುತ್ತದೆ. ಆದರೆ ರೈತರು ಬೆಳೆದಂಥ ಬೆಳೆ ನಾಶವಾಗಿ ಆ ಸಂಕಟದಲ್ಲಿ ಅವರು ಸತ್ತಿದ್ದಾರೆ. ಅಂಥವರಿಗೆ ಸರ್ಕಾರ ಪರಿಹಾರ ಕೊಡಲಿಲ್ಲ....

ಅಧ್ಯಕ್ಷರು: ನನಗೆ ನಿಮ್ಮ ಭಾವನೆ ಅರ್ಥವಾಗುತ್ತಿದೆ. ನಾನು ಏನು ಹೇಳುತ್ತೇನೆಂದರೆ..

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ತಾವು ಅನೇ ಸಂದರ್ಭಗಳಲ್ಲಿ ನಿಯಮಾವಳಿಗಳನ್ನು ರದ್ದುಪಡಿಸಿ ಪ್ರಶ್ನೋತ್ತರ ವೇಳೆಯನ್ನು ಮುಂದೂಡಿದ್ದೀರಿ. ಇವತ್ತೂ ಸಹ ಇಂಥ ಮಹತ್ವದ ವಿಷಯ ಇರುವಾಗ ಪ್ರಶ್ನೋತ್ತರ ವೇಳೆಯನ್ನು

ಮುಂದೂಡಿ ಇದನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ....

ಅಧ್ಯಕ್ಷರು: ಈ ವಿಷಯದ ಮಹತ್ವ ಮತ್ತು ಇದರ ಗಾಂಭೀರ್ಯವನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ನಾವು ಬಹಳ ದಿವಸಗಳ ನಂತರ ಸಮಾವೇಶಗೊಂಡಿದ್ದೇವೆ. ಆದ್ದರಿಂದ ಪ್ರಶ್ನೋತ್ತರ ವೇಳೆಯನ್ನು ರದ್ದು ಮಾಡುವುದು ಬೇಡ. ಮಾನ್ಯ ವಿರೋಧ ಪಕ್ಷದ ನಾಯಕರು, ಮತ್ತು ಅವರ ಸಂಗಾತಿಗಳು ನಿನ್ನೆಯ ದಿವಸ ಹೇಳಿರುವಂಥದ್ದು, ಮತ್ತು ಇವತ್ತು ತಾವು ಹೇಳಿರತಕ್ಕಂಥದ್ದು ಎಲ್ಲವನ್ನೂ ಸಹ ನಾನು ಗಮನಿಸಿದ್ದೇನೆ. ಈ ವಷಯವನ್ನು ಖಂಡಿತವಾಗಿ ಪ್ರಾಧಾನ್ಯತೆ ಮೇಲೆ ಪ್ರಶ್ನೋತ್ತರ ವೇಳೆ ಮುಗಿದ ನಂತರ ನಾವು ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ ತಾವು ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟರೆ ನಾನು ನಿಮ್ಮನ್ನು ಕನ್‌ವಿನ್ಸ್ ಮಾಡುತ್ತೇನೆ. ನಾನು ಹೇಳುವುದು ತಮಗೆ ಕನ್‌ವಿನ್ಸ್ ಆಗಲಿಲ್ಲವೆಂದಾದರೆ, ತಾವು ಏನು ತೀರ್ಮಾನಕ್ಕೆ ಬರುತ್ತೀರೋ ಅದಕ್ಕೆ ನಾನು ಒಪ್ಪುತ್ತೇನೆ.

ಅಧ್ಯಕ್ಷರು: ನಾನು ತಮ್ಮಲ್ಲಿ ವಿನಂತಿ ಮಾಡುವುದು ಇಷ್ಟೆ, ಮೊದಲು ಪ್ರಶ್ನೋತ್ತರ ವೇಳೆಯನ್ನು ತೆಗೆದುಕೊಳ್ಳೋಣ. ನಂತರ ರೈತರ ವಿಚಾರದ ಬಗ್ಗೆ ಚರ್ಚೆಗೆ ತೆಗೆದುಕೊಳ್ಳೋಣ. ದಯಮಾಡಿ ಸಹಕರಿಸಬೇಕು.

ಶ್ರೀ ಬೈರೇಗೌಡ: ಮಾನ್ಯ ಅಧ್ಯಕ್ಷರೇ, ವಿಧಾನಪರಿಷತ್ತಿನಲ್ಲೂ ಕೂಡ ಇದೇ ವಿಚಾರ ಪ್ರಸ್ತಾಪಕ್ಕೆ ಬರುತ್ತಿದೆ. ನಾನು ಎರಡೂ ಕಡೆ ಇರಬೇಕಾಗುತ್ತದೆ. ಮಾನ್ಯ ಸದಸ್ಯರುಗಳು ಏನು ಪ್ರಸ್ತಾಪ ಮಾಡಿದ್ದಾರೆ ಅದಕ್ಕೆ ಸರ್ಕಾರದ ಕಡೆಯಿಂದ ಉತ್ತರ ಕೊಡುವುದಕ್ಕೆ ಅಡ್ಡಿ ಏನೂ ಇಲ್ಲ. ಉತ್ತರ ಕೊಡುವುದಕ್ಕೆ ಸರ್ಕಾರ ತಯಾರಿದೆ. ಆದರೆ ಮೇಲ್ಮನೆ ಮತ್ತು ಇಲ್ಲಿ ಸಮಯ ಹೊಂದಾಣಿಕೆ ಆಗುವಂತೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇದರ ಬಗ್ಗೆ ನಾವು ನಿಲುವಳಿ ಸೂಚನೆ ಕೊಟ್ಟಿದ್ದೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಸರ್ಕಾರದ ಉತ್ತರವನ್ನು ಪಡೆದುಕೊಂಡು ನಾವು ಏನು ಮಾಡೋಣ? ಅಲ್ಲಿ ಜನ ಸತ್ತುಹೋಗಿದ್ದಾರೆ. ಅಲ್ಲಿಯ ರೈತರು ಏತಕ್ಕಾಗಿ ಸತ್ತರೆಂದು ಇವರು ಕೃಷಿ ಸಚಿವರಾಗಿ ತಿಳಿದುಕೊಳ್ಳುವಂಥ ಪ್ರಯತ್ನ ಮಾಡಲಿಲ್ಲ. ಸಂಬಂಧಪಟ್ಟ ಸಚಿವರು ವಿಧಾನಪರಿಷತ್ತಿಗೆ ಹೋಗಬೇಕೆಂದು ಹೇಳುತ್ತಾರೆ. ಈಗ ಉತ್ತರ ಕೊಟ್ಟು ಏನು ಪ್ರಯೋಜನೆ? ಆ ರೈತರಿಗೆ ಉತ್ತರ ಬೇಕಾಗಿರಲಿಲ್ಲ. ಅವರಿಗೆ

ಆದಂಥ ನಷ್ಟಕ್ಕೆ ಪರಿಹಾರ ಬೇಕಾಗಿತ್ತು. ಮಾನ್ಯ ಕೃಷಿ ಸಚಿವರು ಲೋಕಸಭೆಯ ಚುನಾವಣೆಯ ಗಡಿಬಿಡಿಯಲ್ಲಿ ಇದ್ದರು. ಆ ಗಡಿಬಿಡಿಯಲ್ಲಿ ಆ ರೈತರ ಪರಿಸ್ಥಿತಿಯನ್ನು ವಿಚಾರಿಸಲು ಅವರಿಗೆ ಪುರುಸೊತ್ತು ಎಲ್ಲಿ ಇತ್ತು? ಅಲ್ಲಿಯ ರೈತ ಸತ್ತಿದ್ದಾನೆಯೋ ಅಥವಾ ಬದುಕಿದ್ದಾನೆಯೋ ಎಂದು ನೋಡುವುದಕ್ಕೆ ಅವರಿಗೆ ಪುರುಸೊತ್ತು ಎಲ್ಲಿ ಇತ್ತು?

ಅಧ್ಯಕ್ಷರು: ಮಾನ್ಯ ಯಡಿಯೂರಪ್ಪನವರೇ, ನೀವು ಚುನಾವಣೆಯಲ್ಲಿ ವಿಜಯಶಾಲಿಗಳಾದವರು ಹಸನ್ಮುಖಿಗಳಾಗಿರಬೇಕು. ನೀವು ಈಗಲೂ ಸಿಟ್ಟಾಗಿ ಇದ್ದರೆ ಹೇಗೆ? ಅವರು ಸೋತವರು. ಆದ್ದರಿಂದ ಅವರು ಸಿಟ್ಟಾಗಿ ಇರಬೇಕು. It is being taken up by way of an Adjournment Motion. They have given notice under Rules 60. The procedure of the House is, immediately after the Question Hour, it will be taken up. So it is for the Government to make the arrangement appropriately. So we will take up the Question Hour.

(2) ಪ್ರಶ್ನೋತ್ತರ

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು.

ಕಂದಾಯ ಇಲಾಖೆಯ ಗ್ರಾಮ ಸಹಾಯಕರ ಬೇಡಿಕೆಗಳು.

1 (185)

ಶ್ರೀ ಕೆ.ಜಯರಾಮ ಶೆಟ್ಟಿ (ಉಳ್ಳಾಲ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಂದಾಯ ಇಲಾಖೆಯ ಗ್ರಾಮ ಸಹಾಯಕ ನೌಕರರು ತಮ್ಮ ಬೇಡಿಕೆಯನ್ನು ಮುಂದಿಟ್ಟು ಉಪವಾಸ ಸತ್ಯಾಗ್ರಹ ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ ಈ ನೌಕರರ ಬೇಡಿಕೆಯನ್ನು ಈಡೇರಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು):

ಅ) ಹೌದು.